# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2712 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 25-03-2022 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬಯಲು ಸೀಮೆ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಶೇಂಗಾ ಬೆಳೆಯುವ ಪ್ರದೇಶದ ವಿಸ್ತೀರ್ಣ ಎಷ್ಟು (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)</td><td>2020-21ನೇ ಸಾಲಿನಲ್ಲಿ ಬಯಲು ಸೀಮೆ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಚಿತ್ರದುರ್ಗ, ತುಮಕೂರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಒಟ್ಟು 3,01,025 ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬೆಳೆಯನ್ನು ಬೆಳೆಯಲಾಗುತ್ತಿದೆ. ಜಿಲ್ಲಾವಾರು ಮತ್ತು ತಾಲ್ಲೂಕುವಾರು ಶೇಂಗಾ ಬೆಳೆಯ ವಿಸ್ತೀರ್ಣವನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.</td></tr>
<tr><td>ಆ)</td><td>ಒಂದು ಎಕರೆ ಪ್ರದೇಶದಲ್ಲಿ ಶೇಂಗಾ ಬೆಳೆಯಲು ರೈತನಿಗೆ ತಗುಲುವ ವೆಚ್ಚ ಎಷ್ಟು ಹಾಗೂ ಪ್ರತಿ ಎಕರೆಗೆ ಎಷ್ಟು ಕ್ವಿಂಟಾಲ್ ಶೇಂಗಾ ಬೆಳೆಯಲಾಗುವುದು;</td><td>2020-21ನೇ ಸಾಲಿನಲ್ಲಿ ರಾಜ್ಯದಲ್ಲಿ ಒಂದು ಎಕರೆ ಪ್ರದೇಶದಲ್ಲಿ ಶೇಂಗಾ ಬೆಳೆಯಲು ರೈತನಿಗೆ ರೂ.23218 ವೆಚ್ಚ ತಗಲುತ್ತದೆ ಹಾಗೂ ಪ್ರತಿ ಎಕರೆಗೆ ಸರಾಸರಿ 4.15 ಕ್ವಿಂಟಾಲ್ ರಷ್ಟು ಶೇಂಗಾ ಉತ್ಪಾದನೆಯಾಗುತ್ತದೆ.</td></tr>
<tr><td>ಇ)</td><td>ಶಿರಾ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಲ್ಲಿ ಶೇಂಗಾ ಬಿತ್ತನೆ ಮಾಡಿದ ಅಥವಾ ಶೇಂಗಾ ಬೆಳೆಯುವ ರೈತರ ಸಂಖ್ಯೆ ಎಷ್ಟು; ಎಷ್ಟು ಎಕರೆ ವಿಸ್ತೀರ್ಣದಲ್ಲಿ ಶೇಂಗಾ ಬೆಳೆ ಬೆಳೆಯಲಾಗಿದೆ; (ವಿವರ ಒದಗಿಸುವುದು)</td><td>ಶಿರಾ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಲ್ಲಿ ಶೇಂಗಾ ಬೆಳೆಯುವ ರೈತರ ಸಂಖ್ಯೆ ಹಾಗೂ ವಿಸ್ತೀರ್ಣದ ವಿವರಗಳು ಈ ಕೆಳಕಂಡಂತಿವೆ;
<table>
<tr><th>ವರ್ಷ</th><th>ರೈತರ ಸಂಖ್ಯೆ</th><th>ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ)</th></tr>
<tr><td>2017</td><td>23735</td><td>14642</td></tr>
<tr><td>2018</td><td>21845</td><td>20731</td></tr>
<tr><td>2019</td><td>30166</td><td>20816</td></tr>
<tr><td>2020</td><td>30684</td><td>28951</td></tr>
<tr><td>2021*</td><td>*</td><td>*</td></tr>
</table>
ಮೂಲ: 2017 ರಿಂದ 2020ರ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರ ವಿಸ್ತೀರ್ಣದ ಅಂತಿಮ ಅಂದಾಜು ವರದಿಯ ಪ್ರಕಾರ.<br><br>*2021ನೇ ಸಾಲಿನ ತಾಲ್ಲೂಕುವಾರು ವರದಿಯು ಪ್ರಗತಿಯಲ್ಲಿದೆ.</td></tr>
</table>

<table>
<tr>
<td>ಈ)</td>
<td>ಕಳೆದ 5 ವರ್ಷಗಳಿಂದಲೂ ಸರಿಯಾದ ಸಮಯಕ್ಕೆ ಮಳೆ ಬಾರದ್ದರಿಂದ ಶೇಂಗಾ ಬೆಳೆ ಉತ್ಪಾದನೆಯು ಕನಿಷ್ಠ ಮಟ್ಟಕ್ಕೆ ಇಳಿದಿರುವುದರಿಂದ ರೈತರು ನಿರಂತರವಾಗಿ ಸಮಸ್ಯೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;</td>
<td>ಶಿರಾ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಿಂದ ಶೇಂಗಾ ಬೆಳೆಯ ಉತ್ಪಾದನೆಯ ವಿವರ ಈ ಕೆಳಕಂಡಂತಿವೆ;
<table>
<tr><th>ವರ್ಷ</th><th>ಉತ್ಪಾದನೆ (ಟನ್ ಗಳಲ್ಲಿ)</th></tr>
<tr><td>2017</td><td>15053</td></tr>
<tr><td>2018</td><td>13032</td></tr>
<tr><td>2019</td><td>16220</td></tr>
<tr><td>2020</td><td>21997</td></tr>
<tr><td>2021*</td><td>*</td></tr>
</table>
ಮೂಲ: 2017 ರಿಂದ 2020ರ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರ ಉತ್ಪಾದನೆಯ ಅಂತಿಮ ಅಂದಾಜು ವರದಿಯ ಪ್ರಕಾರ.<br><br>
*2021ನೇ ಸಾಲಿನ ತಾಲ್ಲೂಕುವಾರು ವರದಿಯು ಪ್ರಗತಿಯಲ್ಲಿದೆ.<br><br>
ಮೇಲಿನ ವರದಿಗಳಂತೆ 2017ಕ್ಕೆ ಹೋಲಿಸಿದರೆ ಶೇಂಗಾ ಬೆಳೆಯು ಉತ್ಪಾದನೆಯಲ್ಲಿ 2018ರಲ್ಲಿ ಇಳಿಕೆಯಾಗಿರುವುದು ಕಂಡುಬಂದಿರುತ್ತದೆ. ಆದರೆ, 2019 ಹಾಗೂ 2020ರಲ್ಲಿ ಉತ್ಪಾದನೆಯಲ್ಲಿ ಏರಿಕೆಯಾಗಿರುತ್ತದೆ.</td>
</tr>
<tr>
<td>ಉ)</td>
<td>ಕಳೆದ 5 ವರ್ಷಗಳಿಂದ ಬಯಲು ಸೀಮೆ ಪ್ರದೇಶದ ಜಿಲ್ಲೆಗಳಲ್ಲಿ ಶೇಂಗಾ ಬೆಳೆಗೆ ವಿಮೆ ಮಾಡಿಸಿದ ರೈತರ ಸಂಖ್ಯೆ ಎಷ್ಟು; ಹಾಗೂ ವಿಮೆ ಮಾಡಿಸಿದ ರೈತರಿಗೆ ವಿಮಾ ಕಂಪನಿಗಳಿಂದ ಪಾವತಿಯಾಗಿರುವ ಮೊತ್ತ ಎಷ್ಟು; (ವರ್ಷವಾರು ವಿವರಗಳನ್ನು ನೀಡುವುದು)</td>
<td>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2017-18 ರಿಂದ 2021 ರ ಮುಂಗಾರು ಹಂಗಾಮಿನವರೆಗೆ ಬಯಲು ಸೀಮೆ ಪ್ರದೇಶದ ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಶೇಂಗಾ ಬೆಳೆಗೆ ವಿಮೆ ಮಾಡಿಸಿದ ರೈತರ ಸಂಖ್ಯೆ ಮತ್ತು ವಿಮಾ ಕಂಪನಿಗಳಿಂದ ಪಾವತಿಯಾಗಿರುವ ಮೊತ್ತದ ವರ್ಷವಾರು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.</td>
</tr>
<tr>
<td>ಊ)</td>
<td>ಅನಕ್ಷರತೆ, ಅಜ್ಞಾನ, ಸಂಪರ್ಕ ಕೊರತೆ ಹಾಗೂ ಹಣಕಾಸಿನ ಸಮಸ್ಯೆಯಿಂದ ಬೆಳೆ ವಿಮೆ ಮಾಡಿಸದೆ ನಷ್ಟಕ್ಕೊಳಗಾದ ರೈತರಿಗೆ ಸರ್ಕಾರ ಯಾವುದಾದರೂ ವಿಶೇಷ ಪ್ಯಾಕೇಜ್ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;</td>
<td>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಮಾರ್ಗಸೂಚಿಯನ್ವಯ ಯೋಜನೆಯಡಿ ನೋಂದಣಿಯಾದ ರೈತರು ಮಾತ್ರ ವಿಮಾ ಪರಿಹಾರ ಪಡೆಯಲು ಅರ್ಹರಾಗುತ್ತಾರೆ.<br><br>
ವಿಮೆ ಮಾಡಿಸದೇ ನಷ್ಟಕ್ಕೆ ಒಳಗಾದ ರೈತರಿಗೆ ಯಾವುದೇ ವಿಶೇಷ ಪ್ಯಾಕೇಜ್ ನೀಡುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಇರುವುದಿಲ್ಲ.</td>
</tr>
<tr>
<td>ಋ)</td>
<td>ಬಯಲು ಸೀಮೆ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಚಿತ್ರದುರ್ಗ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ</td>
<td>ರಾಜ್ಯದಲ್ಲಿ ಕೃಷಿ ಬೆಲೆ ಆಯೋಗವು ಶೇಂಗಾ ಹಾಗೂ ಇತರೆ ಕೃಷಿ ಬೆಳೆಗಳ ಉತ್ಪಾದನಾ ವೆಚ್ಚವನ್ನು ವೈಜ್ಞಾನಿಕವಾಗಿ ಕಂಡುಹಿಡಿಯುವ ಕಾರ್ಯವನ್ನು ನಿರ್ವಹಿಸುತ್ತಿದೆ.</td>
</tr>
</table>

| | | |
|---|---|---|
| | ಜಿಲ್ಲೆಗಳಲ್ಲಿ ಕಳೆದ 40 ವರ್ಷಗಳಿಂದಲೂ ಶೇಂಗಾ ಬೆಳೆಯನ್ನು ಅತೀ ಹೆಚ್ಚು ಪ್ರದೇಶಗಳಲ್ಲಿ ಬೆಳೆಯುತ್ತಿದ್ದು ಹಾಗೂ ಶೇಂಗಾ ಪ್ರಮುಖ ಎಣ್ಣೆಕಾಳು ಬೆಳೆಯಾಗಿರುವುದರಿಂದ, ಈ ಬೆಳೆಯನ್ನು ಸದೃಢಗೊಳಿಸಲು ಹಾಗೂ ವೈಜ್ಞಾನಿಕ ವಿಧಾನಗಳು ಹಾಗೂ ಬೆಳೆಗೆ ಸೂಕ್ತ ಬೆಲೆ ಒದಗಿಸಲು ಶೇಂಗಾ ಅಭಿವೃದ್ಧಿ ಮಂಡಳಿ ಸ್ಥಾಪಿಸುವ ಯೋಜನೆ ಸರ್ಕಾರದ ಮುಂದಿದೆಯೇ? | ಕೇಂದ್ರ ಸರ್ಕಾರವು ಪ್ರತಿ ವರ್ಷ ಶೇಂಗಾ ಒಳಗೊಂಡಂತೆ ಪ್ರಮುಖ ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಘೋಷಿಸುತ್ತದೆ. ಬೆಲೆ ಕುಸಿತದ ಸಂದರ್ಭದಲ್ಲಿ ಕೇಂದ್ರದ ಅನುಮತಿಯೊಂದಿಗೆ ಕೆ.ಒ.ಎಫ್. (ಕರ್ನಾಟಕ ರಾಜ್ಯ ಎಣ್ಣೆಕಾಳು ಬೆಳೆಗಾರರ ಒಕ್ಕೂಟ) ಸಂಸ್ಥೆಯ ಮುಖಾಂತರ ಬೆಂಬಲ ಬೆಲೆಯಲ್ಲಿ ಶೇಂಗಾವನ್ನು ಖರೀದಿಸಲಾಗುವುದು.<br><br>ರಾಜ್ಯದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದಡಿಯಲ್ಲಿ ಎಣ್ಣೆಕಾಳು ಕಾರ್ಯಕ್ರಮವನ್ನು (ಶೇಂಗಾ) ಬೆಳೆಯನ್ನು 18 ಜಿಲ್ಲೆಗಳಲ್ಲಿ ಅನುಷ್ಠಾನ ಮಾಡಲಾಗಿದೆ. ಈ ಯೋಜನೆಯಡಿ ಶೇಂಗಾ (ನೆಲಗಡಲೆ) ಬೆಳೆಯಲ್ಲಿ ಸುಧಾರಿತ ಬೇಸಾಯ ತಾಂತ್ರಿಕತೆಗಳಾದ ಭತ್ತ-ನೆಲಗಡಲೆ ಅನುಕ್ರಮ ನೆಲಗಡಲೆ ಸಾಲು/ಯಾಂತ್ರೀಕೃತ ಬಿತ್ತನೆ ಹಾಗೂ ತೊಗರಿ-ಶೇಂಗಾ ಅಂತರ ಬೆಳೆ ತಾಂತ್ರಿಕತೆಗಳನ್ನು ಯೋಜನೆಯ ಅನುಷ್ಠಾನದಲ್ಲಿರುವ ಜಿಲ್ಲೆಯ ರೈತರಿಗೆ ಕ್ಷೇತ್ರ ಮಟ್ಟದಲ್ಲಿ ಪರಿಚಯಿಸುವ ದೃಷ್ಟಿಯಿಂದ ಪ್ರಾತ್ಯಕ್ಷತೆಗಳನ್ನು ಏರ್ಪಡಿಸಲಾಗಿದೆ. ಇದರ ಜೊತೆಗೆ ಎಣ್ಣೆಕಾಳು ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ವಿವಿಧ ಪರಿಕರಗಳಾದ ಜಿಪ್ಸಂ, ಸುಣ್ಣ, ಜೈವಿಕ ಕೀಟನಾಶಕ, SSP, ರೈಸೋಬಿಯಂಗಳನ್ನು ರೈತರಿಗೆ ಸಹಾಯಧನದಲ್ಲಿ ವಿತರಿಸಲಾಗುತ್ತಿದೆ. ಸದರಿ ಪರಿಕರಗಳ ಜೊತೆಗೆ, ರೈತರ ಕೂಲಿ ಆಳುಗಳ ಸಮಸ್ಯೆ ನಿರ್ವಹಿಸಲು ಸಹಕಾರಿಯಾಗಿ ವಿವಿಧ ಕೃಷಿ ಯಂತ್ರೋಪಕರಣಗಳಾದ ಶೇಂಗಾ ಡಿಗ್ಗರ್, ಮೋಟಾರ್ ಚಾಲಿತ ಸಣ್ಣ ಎಣ್ಣೆಗಾಣಗಳು, ಬಹುಬೆಳೆ ಒಕ್ಕಣೆ ಯಂತ್ರ, ಶಕ್ತಿ ಚಾಲಿತ ಸಿಂಪರಣ ಉಪಕರಣಗಳು, ಸಣ್ಣ ಎಣ್ಣೆಗಾಣ ಉಪಕರಣಗಳನ್ನು ಸಹಾಯಧನದಲ್ಲಿ ವಿತರಿಸಲಾಗಿದೆ. ಜೊತೆಗೆ ಪ್ರಾತ್ಯಕ್ಷತೆಗಳನ್ನು ಕೈಗೊಂಡ ರೈತರಿಗೆ ಯಂತ್ರೋಪಕರಣಗಳ ಬಳಕೆಯ ವೆಚ್ಚವನ್ನು ನೇರ ನಗದು ವರ್ಗಾವಣೆ (DBT) ಮುಖಾಂತರ ಮರು ಭರಿಸಲಾಗಿದೆ.<br><br>ಶೇಂಗಾ ಬೆಳೆಗೆ ಸೂಕ್ತ ಬೆಲೆ ಒದಗಿಸಲು ಶೇಂಗಾ ಅಭಿವೃದ್ಧಿ ಮಂಡಳಿ ಸ್ಥಾಪಿಸುವ ಯೋಜನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: AGRI-ACT/75/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

## ಅನುಬಂಧ-1 (ಎಲ್.ಸಿ.ಕ್ಯೂ-2712)

## 2020-21ನೇ ಸಾಲಿನ ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಶೇಂಗಾ ಬೆಳೆಯ ವಿಸ್ತೀರ್ಣದ ವಿವರಗಳು ಈ ಕೆಳಕಂಡಂತೆ ನೀಡಲಾಗಿದೆ.

| ಕ್ರ. ಸಂ. | ಜಿಲ್ಲೆಗಳು | ತಾಲ್ಲೂಕು | ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ) |
|---|---|---|---|
| 1 | ಚಿತ್ರದುರ್ಗ | ಚಳ್ಳಕೆರೆ | 105537 |
| 2 | | ಚಿತ್ರದುರ್ಗ | 8848 |
| 3 | | ಮೊಳಕಾಲ್ಮೂರು | 26671 |
| 4 | | ಹಿರಿಯೂರು | 24214 |
| 5 | | ಹೊಸದುರ್ಗ | 2084 |
| 6 | | ಹೊಳಲ್ಕೆರೆ | 296 |
| | | **ಒಟ್ಟು** | **167650** |
| 1 | ತುಮಕೂರು | ಕುಣಿಗಲ್ | 55 |
| 2 | | ಕೊರಟಗೆರೆ | 5952 |
| 3 | | ಗುಬ್ಬಿ | 308 |
| 4 | | ಚಿಕ್ಕನಾಯಕನಹಳ್ಳಿ | 68 |
| 5 | | ತಿಪಟೂರು | 4 |
| 6 | | ತುಮಕೂರು | 601 |
| 7 | | ತುರುವೇಕೆರೆ | 6 |
| 8 | | ಪಾವಗಡ | 32197 |
| 9 | | ಮಧುಗಿರಿ | 18025 |
| 10 | | ಸಿರಾ | 28951 |
| | | **ಒಟ್ಟು** | **86167** |
| 1 | ಕೋಲಾರ | ಕೆ.ಜಿ.ಎಫ್ | 1751 |
| 2 | | ಕೋಲಾರ | 127 |
| 3 | | ಬಂಗಾರಪೇಟೆ | 497 |
| 4 | | ಮಾಲೂರು | 233 |
| 5 | | ಮುಳಬಾಗಲು | 7493 |
| 6 | | ಶ್ರೀನಿವಾಸಪುರ | 1446 |
| | | **ಒಟ್ಟು** | **11547** |
| 1 | ಚಿಕ್ಕಬಳ್ಳಾಪುರ | ಗುಡಿಬಂಡೆ | 1003 |
| 2 | | ಗೌರಿಬಿದನೂರು | 4331 |
| 3 | | ಚಿಂತಾಮಣಿ | 9081 |
| 4 | | ಚಿಕ್ಕಬಳ್ಳಾಪುರ | 1079 |
| 5 | | ಬಾಗೇಪಲ್ಲಿ | 19033 |
| 6 | | ಶಿಡ್ಲಘಟ್ಟ | 1134 |
| | | **ಒಟ್ಟು** | **35661** |
| | | **ಮಹಾ ಒಟ್ಟು** | **301025** |

ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರ 2020-21ರ ವಿಸ್ತೀರ್ಣದ ಅಂತಿಮ ಅಂದಾಜು ವರದಿಯ ಪ್ರಕಾರ.

# ಅನುಬಂಧ-2 (ಎಲ್.ಸಿ.ಕ್ಯೂ-2712)

**ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2017-18 ನೇ ಸಾಲಿನಿಂದ 2021ರ ಮುಂಗಾರು ಹಂಗಾಮಿನವರೆಗಿನ ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೋಲಾರ ಮತ್ತು ತುಮಕೂರು ಜಿಲ್ಲೆಗಳ ಶೇಂಗಾ ಬೆಳೆಗೆ ವಿಮೆ ಮಾಡಿಸಿದ ರೈತರ ಸಂಖ್ಯೆ ಹಾಗೂ ಪಾವತಿಯಾದ ಬೆಳೆ ವಿಮೆ ಪರಿಹಾರದ ಮೊತ್ತ**

(ಆರ್ಥಿಕ ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವರ್ಷ | ಚಿಕ್ಕಬಳ್ಳಾಪುರ | | ಚಿತ್ರದುರ್ಗ | | ಕೋಲಾರ | | ತುಮಕೂರು | |
|---|---|---|---|---|---|---|---|---|---|
| | | ನೋಂದಣಿಯಾದ ರೈತರ ಸಂಖ್ಯೆ | ಬೆಳೆ ವಿಮೆ ಪರಿಹಾರ ಮೊತ್ತ | ನೋಂದಣಿಯಾದ ರೈತರ ಸಂಖ್ಯೆ | ಬೆಳೆ ವಿಮೆ ಪರಿಹಾರ ಮೊತ್ತ | ನೋಂದಣಿಯಾದ ರೈತರ ಸಂಖ್ಯೆ | ಬೆಳೆ ವಿಮೆ ಪರಿಹಾರ ಮೊತ್ತ | ನೋಂದಣಿಯಾದ ರೈತರ ಸಂಖ್ಯೆ | ಬೆಳೆ ವಿಮೆ ಪರಿಹಾರ ಮೊತ್ತ |
| 1 | 2017-18 | 8634 | 0.00 | 34518 | 301.96 | 6466 | 0.00 | 41544 | 38.50 |
| 2 | 2018-19 | 5563 | 592.72 | 27414 | 8859.58 | 2275 | 0.00 | 39945 | 90031.21 |
| 3 | 2019-20 | 2537 | 0.00 | 37618 | 5580.90 | 1088 | 1.41 | 38263 | 3697.92 |
| 4 | 2020-21 | 3041 | 112.39 | 60695 | 1114.02 | 223 | 0.84 | 45003 | 112.57 |
| 5 | 2021 ಮುಂಗಾರು | 1800 | 0.00 | 42504 | 136.66 | 446 | 0.87 | 33356 | 11.01 |